ಭೀಮ ನೆನಪು

# ನೀನಿರದಿದ್ದರೆ ನಾನೊಂದು ಕೊರಡಾಗಿ ಹೋಗುತ್ತಿದ್ದೆ ರಮೂ...



ಬಲು ಅಪರೂಪದ ಜೋಡಿ... ಬಿ.ಆರ್. ಅಂಬೇಡ್ಕರ್ ಮತ್ತು ರಮಾಬಾಯಿ ಚಿತ್ರಕೃಪೆ: ವಿಕಿಕಾಮನ್ಸ್

## ಬಾಬಾ ಸಾಹೇಬರು ರಮಾಬಾಯಿ ಅವರಿಗೆ ಬರೆದ ಪತ್ರ

1930ರ ಡಿಸೆಂಬರ್‌ನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ದುಂಡು ಮೇಜಿನ ಸಮ್ಮೇಳನಕ್ಕೆ ಲಂಡನ್‌ಗೆ ತೆರಳಿದ್ದಾಗ ಅವರ ಹೆಂಡತಿ ರಮಾಬಾಯಿ ಅವರಿಗೆ ಬರೆದ ಪತ್ರ ಇಲ್ಲಿದೆ. ಛಲಬಿಡದ ಹೋರಾಟ, ದೃಢತೆಯ ಮೂರ್ತಿಯಾಗಿ ಜನಮಾನಸದಲ್ಲಿ ಪ್ರತಿಷ್ಠಾಪಿತಗೊಂಡಿರುವ ಅಂಬೇಡ್ಕರ್ ಅವರ ಅಂತಃಕರಣದ ಇನ್ನೊಂದು ಆಯಾಮವನ್ನು ಈ ಪತ್ರ ತೆರೆದಿಡುತ್ತದೆ. ಪ್ರೇಮ, ಪಶ್ಚಾತ್ತಾಪ, ಆತಂಕ, ಆಕ್ರೋಶ, ಹತಾಶೆ, ಆವೇಶ, ಅನಾಥಪ್ರಜ್ಞೆಗಳನ್ನು ಒಳಗೊಂಡಿರುವ ಈ ಪತ್ರದ ಒಂದೊಂದು ಸಾಲೂ ಬಾಬಾಸಾಹೇಬರ ಒಳಗುದಿಯನ್ನು ತೆರೆದಿಡುತ್ತದೆ. ಈ ತೀವ್ರವಾದ ಭಾವಹರಿವಿನ ಇನ್ನೊಂದು ತುದಿಯಲ್ಲಿ ಇರುವುದು ಅವರ ಪತ್ನಿ ರಮಾಬಾಯಿ. ಅಂಬೇಡ್ಕರರ ಸಂಘರ್ಷದ ಬದುಕಿನಲ್ಲಿ ರಮಾಬಾಯಿ ಅವರ ಪಾತ್ರ ಎಂಥದಿತ್ತು ಎನ್ನುವುದನ್ನೂ ಈ ಪತ್ರ ಪರೋಕ್ಷವಾಗಿ ಕಾಣಿಸುತ್ತದೆ.

ಬಾಬಾಸಾಹೇಬರು ಮರಾಠಿಯಲ್ಲಿ ಬರೆದಿರುವ ಪತ್ರವನ್ನು 'ಫಾರ್ವರ್ಡ್ ಪ್ರೆಸ್ ತಂಡ' ಹಿಂದಿಗೆ ಅನುವಾದಿಸಿದೆ. ಪರ್ದೀಪ್ ಅತ್ರಿ ಅವರು ಹಿಂದಿಯಿಂದ ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ. ಏಪ್ರಿಲ್ 14ರ ಅಂಬೇಡ್ಕರ್ ಜನ್ಮದಿನದ ಸಂದರ್ಭದಲ್ಲಿ, ಬಾಬಾಸಾಹೇಬರನ್ನು ನೆನಪಿಸುವ ಈ ಪತ್ರವನ್ನು ಚೈತ್ರಿಕಾ ನಾಯ್ಕ ಹರ್ಗಿ 'ಸುಧಾ' ಓದುಗರಿಗಾಗಿ ಕನ್ನಡಕ್ಕೆ ತಂದಿದ್ದಾರೆ.